ಸಾಕ್ಷಿಯನ್ನು ದಿಃ **27.03.2023** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ 3 ಮತ್ತು 5 ನೇ ಪ್ರತಿವಾದಿ ಪರ ಶ್ರೀ ಆರ್.ಎಸ್.ಎಂ. ವಕೀಲ**ರಿಂದ**</u>

ನನ್ನ ಹೆಸರು ಅಫ್ಜಲ್ ಖಾನ್. ನಾನು ಎಸ್.ಎಸ್.ಎಲ್.ಸಿ ವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು 1977 ರಲ್ಲಿ ಹುಟ್ಟಿದ್ದೇನೆ. ದಾವಾ ಸೈಟ್ ನಂ. 2148/1256/11, ದಾವಾ ಸೈಟ್ ನಂ. 2148/1256/12 ಹಾಗೂ ದಾವಾ ಸೈಟ್ ನಂ. 2148/1256/15 ಈ ಸೈಟುಗಳ ಬಿಡ್ 1983 ರಲ್ಲಿ ಆಗಿತ್ತು. ಅದರಲ್ಲಿ ನಾನು ಭಾಗಿಯಾಗಿರಲಿಲ್ಲ, ನನ್ನ ತಂದೆ ಮತ್ತು ತಾಯಿ ಭಾಗಿಯಾಗಿದ್ದರು. ಬಿಡ್ ಆದಂತಹ ಸಂದರ್ಭದಲ್ಲಿ ಮುನ್ಸಿಪಾಲಿಟಿಗೆ ಸೈಟುಗಳ ಬಾಬ್ತು ಕಟ್ಟಿರುವ ಹಣದ ರಶೀದಿಗಳನ್ನು ಹಾಜರು ಪಡಿಸಿದ್ದೇನೆ. ಈ ಹಂತದಲ್ಲಿ ಸಾಕ್ಷಿಗೆ ಅವರು ಹಾಜರು ಪಡಿಸಿರುವ ದಾಖಲೆಗಳನ್ನು ನೀಡಿ ಇದರಲ್ಲಿ ಸದರಿ ರಶೀದಿಗಳು ಇವೆಯಾ ನೋಡಿ ಎಂದಾಗ ಸಾಕ್ಷಿ ಸದರಿ ದಾಖಲಾತಿಗಳನ್ನು ಗಮನಿಸಿ ಇರದಲ್ಲಿ ಇಲ್ಲ ಬ್ಯಾಂಕಿನಲ್ಲಿ ಸಾಲ ಪಡೆಯುವಾಗ ಬ್ಯಾಂಕಿನಲ್ಲಿ ಹಾಜರು ಪಡಿಸಿದ್ದೇನೆ ಎನ್ನುತ್ತಾರೆ. ದಾವಾ ಸ್ವತ್ತುಗಳ ಲೇ-ಔಟ್ ನ ಅನುಮೋದಿತ ನಕ್ಷೆಯನ್ನು ಹಾಜರು ಪಡಿಸಿಲ್ಲ. ಅಂತಹ ಅನುಮೋದಿತ ನಕ್ಷೆಯು ನಗರ ಯೋಜನಾ ಪ್ರಾಧಿಕಾರದವರು ನೀಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿದು ನಂತರ ನೀಡಿರುವುದಿಲ್ಲ ಎನ್ನುತ್ತಾರೆ. ಯಾವುದೆ ಸ್ವತ್ತನ್ನು ಗುರುತಿಸಬೇಕು ಎಂದರೆ ಅನುಮೋದಿತ ನಕ್ಷೆ ಇರುವುದು ಅವಶ್ಯಕ ಎಂದರೆ ಅದರ ವಿಚಾರ ನನಗೆ ಗೊತ್ತಿಲ್ಲ, ಅಂತಹ ಯಾವುದೆ ದಾಖಲೆಯನ್ನು ನನಗೆ ಕೊಟ್ಟಿಲ್ಲ ಎನ್ನುತ್ತಾರೆ. ಅನುಮೋದಿತ ನಕ್ಷೆಯು ತಯಾರಿಸುವುದು ನಗರ ಯೋಜನಾ ಪ್ರಾಧಿಕಾರದವರ ಕರ್ತವ್ಯ ಅದನ್ನು ಅವರು ತಯಾರಿಸಿರುತ್ತಾರೆ ಮತ್ತು ನಮಗೆ ನೀಡಿರುತ್ತಾರೆ ಆದರೂ ಅಂತಹ ಯಾವುದೆ ದಾಖಲೆ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ಸೈಟುಗಳ ನೋಂದಣಿ ಸಮಯದಲ್ಲಿ ಅನುಮೋದಿತ ನಕ್ಷೆಯನ್ನು ಹಾಜರುಪಡಿಸಲಿಲ್ಲ, ಕೇವಲ ಹಣ ಪಾವತಿ ರಶೀದಿಗಳನ್ನು ಹಾಜರುಪಡಿಸಿ ನೊಂದಣಿ ಮಾಡಿಕೊಂಡಿದ್ದೇವು. ನಮ್ಮ ತಂದೆ ಟಿಂಬರ್ ಬ್ಯೂಜಿನೆಸ್ ಮಾಡುತ್ತಿದ್ದರು ಎಂಬ ಬಗ್ಗೆ ನ್ಯಾಯಾಲಯಕ್ಕೆ ಯಾವುದೆ ದಾಖಲೆ ಹಾಜರು ಪಡಿಸಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.